

بِسۡمِ اللّٰہِ الرَّحۡمٰنِ الرَّحِیۡمِ

# ಯಥಾರ್ಥ ಅಹ್ಮದಿಯರ ಗುಣಲಕ್ಷಣಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಅಮೆರಿಕದ ಮೇರಿಲ್ಯಾಂಡ್‌ನ **'ಬೈತುರಹ್ಮಾನ್'** ಮಸೀದಿಯಲ್ಲಿ 02–11–2018 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಪ್ರತಿಯೊಬ್ಬ ಪುರುಷ ಅಥವಾ ಮಹಿಳೆ ತನ್ನನ್ನು ಅಹ್ಮದಿ ಎಂದು ಹೇಳಿಕೊಳ್ಳುವುದರಿಂದ ಮಾತ್ರ ವಾಸ್ತವಿಕವಾಗಿ ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಾದಗಳನ್ನು ನಂಬುವ ನೈಜ ಅಹ್ಮದಿಯಾಗಿ ತನ್ನನ್ನು ಪರಿವರ್ತಿಸಿಕೊಳ್ಳುವುದಿಲ್ಲ. ಒಬ್ಬ ನೈಜ ಅಹ್ಮದಿಯಾಗಲು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಕೆಲವು ಶರತ್ತುಗಳನ್ನು ವಿಧಿಸಿದ್ದಾರೆ. ಕೆಲವು ಹೊಣೆಗಾರಿಕೆಗಳನ್ನು ಹೇರಿದ್ದಾರೆ. ಕೆಲವು ಕಡ್ಡಾಯ ಕರ್ತವ್ಯಗಳ ಕಡೆಗೆ ಗಮನ ಹರಿಸಿದ್ದಾರೆ. ಈ ಆಜ್ಞೆಗಳನ್ನು ಅನುಷ್ಠಾನಕ್ಕೆ ತರುವಿರಾದರೆ ನೀವು ವಾಸ್ತವಿಕವಾಗಿ ನನ್ನ ಜಮಾಅತಿನಲ್ಲಿ ಸೇರಿದವರಾಗಿ ಗಣಿಸಲ್ಪಡುವಿರಿ ಎಂದು ಹೇಳಿದ್ದಾರೆ. ಅನುಷ್ಠಾನ ಬದ್ಧನಾದ ಅಹ್ಮದಿಯಾಗಲು ಎಲ್ಲಾ ಶಕ್ತಿ ಸಾಮರ್ಥ್ಯಗಳೊಂದಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಪ್ರತೀಕ್ಷಿಸಿದ್ದ ಹಾಗೆ ಕಾರ್ಯನಿರತನಾಗುವುದು ಆವಶ್ಯಕವಾಗಿದೆ. ಅವರು ಹೇಳಿದರು: ಬೈಅತ್ ಮಾಡುವುದು ಎಂದರೆ ಅಲ್ಲಾಹನಿಗೆ ಜೀವವನ್ನು ಅರ್ಪಿಸುವುದಾಗಿದೆ. ಇದು ಸಾಮಾನ್ಯವಾದ ವಿಷಯವೇನೂ ಅಲ್ಲ. ನಾವು ನಮ್ಮ ಯಾವುದಾದರೂ ವಸ್ತುವನ್ನು ಇನ್ನೊಬ್ಬನಿಗೆ ಮಾರಾಟ ಮಾಡಿದರೆ ಅನಂತರ ನಮಗೆ ಆ ವಸ್ತುವಿನ ಮೇಲೆ ಯಾವ ಹಕ್ಕು ಸಹ ಇರುವುದಿಲ್ಲ. ಆದುದರಿಂದ ಬೈಅತ್ ಮಾಡಿದ ನಂತರ ನಾವು ನಮ್ಮ ಮೇಲೆ ಈ ರೀತಿಯ ಯೋಚನೆಯನ್ನು ಹಾಯಿಸಬೇಕು. ನಾವು ನಮ್ಮ ಜೀವದ ಬಗ್ಗೆ ಈ ಯೋಚನೆಯನ್ನು ಇರಿಸಿಕೊಳ್ಳಬೇಕು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಬೈಅತ್ ಮಾಡಿದವನು ಮೊತ್ತಮೊದಲು ವಿನಯ ಭಾವನೆಯನ್ನು ಅವಲಂಬಿಸಬೇಕು. ತನ್ನ ಸ್ವಂತ ಇಷ್ಟ ಮತ್ತು ಅಹಂಭಾವದಿಂದ ದೂರ ಸರಿಯಬೇಕು. ಇದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸ್ವಂತ ವಚನಗಳಾಗಿವೆ. ಆದರೆ ಕೆಲವು ಜನರಲ್ಲಿ ಸ್ವಂತ ಇಷ್ಟ ಮತ್ತು ಅಹಂಭಾವ ಎಷ್ಟಿದೆ ಎಂದರೆ ಒಬ್ಬ ಹುದ್ದೇದಾರ ಇನ್ನೊಬ್ಬ ಹುದ್ದೇದಾರನ ಬಗ್ಗೆ ಸಿಟ್ಟುಗೊಂಡ ಕಾರಣ ನಾನು ಮಸ್‌ಜಿದ್‌ನಲ್ಲಿರುವಾಗ ಸಹ ಮಸ್‌ಜಿದ್‌ಗೆ ನಮಾಝ್‌ಗೆ ಆಗಮಿಸಲಿಲ್ಲ. ಅದಕ್ಕೆ ಕಾರಣ ಆ ಹುದ್ದೇದಾರನೊಂದಿಗೆ ಈ ಹುದ್ದೇದಾರನ ಸಂಬಂಧ ಸರಿಯಾಗಿರಲಿಲ್ಲ. ಸ್ವಂತ ಇಷ್ಟ ಮತ್ತು ಅಹಂಭಾವದ ಸ್ಥಿತಿ ಹೇಗಿದೆ ಎಂದರೆ ಖಿಲಾಫತ್‌ನೊಂದಿಗೆ ಬೈಅತ್ ಮಾಡಿದುದಾಗಿ ವಾದಿಸುತ್ತಿದ್ದರೂ ಅದರ ಬಗ್ಗೆ ಲಕ್ಷ್ಯ ನೀಡುವುದಿಲ್ಲ.

ಖಲೀಫರು ಮಸ್‌ಜಿದ್‌ನಲ್ಲಿರುವಾಗ ಅವರ ಹಿಂದೆ ನಿಂತು ನಮಾಝ್ ಅನುಷ್ಠಿಸಲು ಹೋಗಬೇಕಾಗಿದೆ. ಮಸ್‌ಜಿದ್‌ಗೆ ಹೋಗಬೇಕಾದುದು ಯಾವುದೇ ಹುದ್ದೇದಾರನಿಗೋಸ್ಕರವಲ್ಲ. ಒಬ್ಬ ಹುದ್ದೇದಾರನ ಸ್ಥಿತಿ ಈ ರೀತಿಯಾದರೆ ಅಂತಹ ಅಹ್ಮದಿ ಆಗಿರುವುದರಿಂದ ಲಾಭವೇನೂ ಇಲ್ಲ. ಅಹಂಭಾವವನ್ನು ತ್ಯಜಿಸಬೇಕು. ಸ್ವಂತ ಇಷ್ಟಪ್ರಕಾರ ವರ್ತಿಸುವುದನ್ನು ಬಿಟ್ಟು ಬಿಡಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ನೀವು ಬೈಅತ್ ಮಾಡುವಾಗ ಮಾಡಿದ ವಾಗ್ದಾನ ಬೇರೆಯೇ ಆಗಿದ್ದು ನಿಮ್ಮ ಕರ್ಮಗಳು ಅವುಗಳಿಗೆ ಅನುಸಾರವಾಗಿರದಿದ್ದರೆ ನೀವು ನೋಡಿರಿ ಇವುಗಳ ಮಧ್ಯೆ ವ್ಯತ್ಯಾಸ ಎಷ್ಟಿದೆ? ಎಷ್ಟು ದೊಡ್ಡ ವೈರುಧ್ಯವಿದೆ ನಿಮ್ಮ ನುಡಿ ಮತ್ತು ನಡೆಗಳಲ್ಲಿ? ನೀವು ಅಲ್ಲಾಹನೊಂದಿಗೆ ವ್ಯತ್ಯಾಸವಾದ ರೀತಿಯಲ್ಲಿ ವರ್ತಿಸುವಿರಾದರೆ ಅವನು ಸಹ ಅದೇ ರೀತಿ ವ್ಯತ್ಯಾಸದಿಂದ ವರ್ತಿಸುವನು. ಆದುದರಿಂದ ನೀವು ನಿಮ್ಮ ವಿಶ್ವಾಸಗಳನ್ನು ಮತ್ತು ಕರ್ಮಗಳನ್ನು ಪರಿಶೋಧಿಸಿರಿ. ನೀವು ನಿಮ್ಮಲ್ಲಿ ಉತ್ತಮ ಬದಲಾವಣೆ ಉಂಟುಮಾಡಿರುವಿರೋ ಪರಿಶುದ್ಧರಾಗಿರುವಿರೋ ಎಂದು ಪರಿಶೋಧಿಸಿರಿ. ಹಾಗೆ ಮಾಡಿದ್ದರೆ ನಿಮ್ಮ ಹೃದಯ ಅಲ್ಲಾಹನ ಅರ್ಶ್ ಆಗುವುದು. ನೀವು ಅಲ್ಲಾಹನ ಸಂರಕ್ಷಣೆಯ ನೆರಳಿನಡಿಯಲ್ಲಿರುವವರಾಗುವಿರಿ.

ನಾನು ಪದೇ ಪದೇ ನಿಮ್ಮೊಂದಿಗೆ ಹೇಳಿದ್ದೇನೆ. ನೀವು ಹೇಗೆ ಪರಿಶುದ್ಧರಾಗಬೇಕೆಂದರೆ ಸಹಾಬರು ತಮ್ಮನ್ನು ಪರಿವರ್ತಿಸಿದ ಹಾಗೆ. ಅವರು ಅನೇಕ ವರ್ಷಗಳ ಮಾತ್ರವಲ್ಲ ಪೀಳಿಗೆಗಳಷ್ಟು ಹಿಂದಿನ ಹಗೆತನವನ್ನು ಅಲ್ಲಾಹನಿಗೋಸ್ಕರ ಮಾತ್ರ ದೂರ ಸರಿಸಿ ಪ್ರೀತಿ, ಭ್ರಾತೃಭಾವನೆಗಳಿಗೆ ಬದಲಾಯಿಸಿದರು. ಸಹಾಬರು ಶಿರ್ಕ್‌ನಿಂದ ಪಶ್ಚಾತ್ತಾಪಗೊಂಡು ದೂರ ಸರಿದಾಗ ಅವರು ರಹಸ್ಯವಾದ ಶಿರ್ಕ್‌ನಿಂದ ಸಹ ತಮ್ಮನ್ನು ರಕ್ಷಿಸಲು ಪ್ರಯತ್ನಿಸಿದರು. ರಹಸ್ಯ ಶಿರ್ಕ್ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ವಿವರಿಸಿದ್ದಾರೆ: ಶಿರ್ಕ್ ಎಂದರೆ ಕೇವಲ ಕಲ್ಲು ವಿಗ್ರಹ ಮೊದಲಾದವುಗಳನ್ನು ಪೂಜಿಸುವುದು ಮಾತ್ರವಲ್ಲ, ಸಾಧನ ಸಾಮಗ್ರಿಗಳ ಬಗ್ಗೆ ಆರಾಧನೆಯ ಭಾವ ಹೊಂದುವುದು ಸಹ ಶಿರ್ಕ್ ಆಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಹೇಳಿದ್ದಾರೆ: ಕರ್ಮಗಳ ಬಗ್ಗೆ ತೋರಿಕೆಯಿಂದ ವರ್ತಿಸುವುದು, ರಹಸ್ಯವಾದ ಅಭಿಲಾಷೆಗಳನ್ನು ಹೊಂದುವುದು ಸಹ ಶಿರ್ಕ್ ಆಗಿದೆ. ಧಾರ್ಮಿಕ ಆಜ್ಞೆಯನ್ನು ನಿರ್ಲಕ್ಷಿಸಿ ಲೌಕಿಕ ಆಶೆಗಳನ್ನು ಈಡೇರಿಸುವುದಾದರೆ ಅವನು ಸಹ ಶಿರ್ಕ್ ಮಾಡುತ್ತಾನೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಬಾಯಿಯಿಂದ ಲಾಇಲಾಹ ಇಲ್ಲಲ್ಲಾಹ್ ಎಂದು ಹೇಳಿ ಹೃದಯದಲ್ಲಿ ಸಾವಿರಾರು ವಿಗ್ರಹಗಳನ್ನು ಹೊಂದಿರುವುದರ ಹೆಸರು ತೌಹೀದ್ (ಏಕದೇವ ವಿಶ್ವಾಸ) ಅಲ್ಲ. ಒಬ್ಬನು ತನ್ನ ಕೆಲಸ, ತನ್ನ ವಂಚನೆ, ಮೋಸಗಾರಿಕೆಗಳಿಗೆ, ತನ್ನ ತಂತ್ರಗಳಿಗೆ ಅಲ್ಲಾಹನಿಗೆ ನೀಡಬೇಕಾದಂತಹ ಮಹತ್ವ ನೀಡುವುದಾದರೆ ಅಥವಾ ಅಲ್ಲಾಹನ ಬಗ್ಗೆ ಭರವಸೆ ಹೊಂದಬೇಕಾದ ರೀತಿಯಲ್ಲಿ ಯಾವುದಾದರೂ ಮನುಷ್ಯನ ಬಗ್ಗೆ ಭರವಸೆಯನ್ನು ಹೊಂದುವುದಾದರೆ ಅವನು ಶಿರ್ಕ್ ಮಾಡುತ್ತಾನೆ. ಅಲ್ಲಾಹನಿಗೆ ನೀಡಬೇಕಾದ ಗೌರವವನ್ನು ಒಬ್ಬನು ತನಗೆ ಸ್ವಂತ ನೀಡುವುದಾದರೆ ಅವನು ಸಹ ಶಿರ್ಕ್

ಮಾಡುತ್ತಾನೆ. ಹೀಗೆಲ್ಲಾ ಮಾಡುವವನು ಅಲ್ಲಾಹನ ದೃಷ್ಟಿಯಲ್ಲಿ ವಿಗ್ರಹಾರಾಧಕನಾಗಿದ್ದಾನೆ.

ಒಬ್ಬ ವ್ಯಕ್ತಿ ನನ್ನೊಂದಿಗೆ ಹೇಳಿದರು: ಜನರು ಖಲೀಫರಿಗೆ ಎಷ್ಟು ಉನ್ನತ ಸ್ಥಾನ ನೀಡುತ್ತಾರೆಂದರೆ ಅವರು ಶಿರ್ಕ್‌ನ ಗಡಿಯ ತನಕ ತಲಪುತ್ತಾರೆ ಎಂದು. ನಾನು ಸ್ಪಷ್ಟಪಡಿಸಲು ಇಚ್ಛಿಸುತ್ತೇನೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಗುಲಾಮರಾಗಿ ಲೋಕದಿಂದ ಶಿರ್ಕನ್ನು ಕೊನೆಗೊಳಿಸಲು ಆಗಮಿಸಿರುವರು. ಆದುದರಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ನೈಜ ಖಿಲಾಫತ್ ಯಾವ ರೀತಿಯಲ್ಲೂ ಶಿರ್ಕನ್ನು ವರ್ಧಿಸುವಂತಹದು ಆಗಲಾರದು. ಖಿಲಾಫತ್ ಮಾಡಬೇಕಾದ ಮೂಲಭೂತ ಕೆಲಸ ಶಿರ್ಕನ್ನು ಕೊನೆಗೊಳಿಸುವುದೇ ಆಗಿದೆ ಮತ್ತು ತೌಹೀದನ್ನು ಸ್ಥಾಪಿಸುವುದಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಯಾವ ಕೆಲಸಕ್ಕೋಸ್ಕರ ನಿಯೋಜಿಸಲ್ಪಟ್ಟರೋ ಆ ಕೆಲಸವನ್ನು ಪೂರ್ಣಗೊಳಿಸುವುದಾಗಿದೆ. ಆದರೆ ಖಿಲಾಫತ್ ಬಗ್ಗೆ ಗೌರವ ಭಾವನೆ ಸ್ಥಾಪಿಸಿಡುವುದು ಆಯಾ ಕಾಲದ ಖಲೀಫರ ಕೆಲಸವಾಗಿದೆ. ಅದು ಆಯಾ ಕಾಲದ ಖಲೀಫರ ಹೊಣೆಗಾರಿಕೆಯಾಗಿದೆ. ಏಕೆಂದರೆ ಅಲ್ಲಾಹನ ವಾಗ್ದಾನಗಳ ಪ್ರಕಾರ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಭವಿಷ್ಯವಾಣಿಗಳ ಪ್ರಕಾರ ಖಿಲಾಫತ್ ಮೂಲಕ ತೌಹೀದ್‌ನ ಸಂದೇಶ ಲೋಕದಲ್ಲಿ ಹಬ್ಬಬೇಕಾಗಿದೆ ಮತ್ತು ಲೋಕದಿಂದ ಶಿರ್ಕ್ ಕೊನೆಗೊಳಿಸಬೇಕಾಗಿದೆ. ಕೆಲವು ಅಪಕ್ವ ಮಸ್ತಿಷ್ಕಗಳಲ್ಲಿ ಖಿಲಾಫತ್ ಬಗ್ಗೆ ಈ ರೀತಿಯ ತಪ್ಪು ಗ್ರಹಿಕೆಗಳು ತರಬೇತಿಯ ಕೊರತೆಯಿಂದ ಎದ್ದೇಳುತ್ತವೆ. ಅವುಗಳನ್ನು ಅವರು ತಮ್ಮ ಮನಸ್ಸಿನಿಂದ ದೂರ ಸರಿಸಬೇಕಾಗಿದೆ.

ತೌಹೀದ್ ಸ್ಥಾಪಿಸಲು ಪ್ರಯತ್ನ ಮಾಡಿ ಶಿರ್ಕ್ ದೂರ ಸರಿಸಿ ಹೃದಯವನ್ನು ಪರಿಶುದ್ಧಗೊಳಿಸುವ ಪ್ರಮುಖ ಕೆಲಸಗಳನ್ನು ಮಾಡಬೇಕೆಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಉಪದೇಶಿಸಿದ ನಂತರ ನಮ್ಮ ಗಮನವನ್ನು ಹರಿಸಿ ನಮ್ಮಿಂದ ಬೈಅತ್ ಪಡೆದ ವಿಷಯ ಸುಳ್ಳು ಮತ್ತು ದುರ್ಗುಣಗಳಿಂದ ನಾವು ನಮ್ಮನ್ನು ರಕ್ಷಿಸಿಕೊಳ್ಳಬೇಕು ಎಂಬುದರ ಬಗ್ಗೆಯಾಗಿದೆ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳಿದ್ದಾನೆ: **ಫಜ್ತನಿಬುರ್ರಿಜ್‌ಸ ಮಿನಲ್ ಅವ್‌ಸಾನಿ ವಜ್‌ತನಿಬೂ ಖೌಲಝ್ಝೂರ್** – ಆದುದರಿಂದ ವಿಗ್ರಹಾರಾಧನೆಯ ಕೆಡುಕುನಿಂದ ದೂರವಿರಿ. ಸುಳ್ಳು ಹೇಳುವುದರಿಂದಲೂ ದೂರವಿದ್ದುಕೊಳ್ಳಿರಿ. (22:31). ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ: ಪವಿತ್ರ ಖುರ್‌ಆನ್‌ನಲ್ಲಿ ಸುಳ್ಳು ಹೇಳುವುದನ್ನು ಒಂದು ಕೊಳಕು ಎಂಬುದಾಗಿ ಹೇಳಲಾಗಿದೆ. ನೋಡಿರಿ, ಇಲ್ಲಿ ಸುಳ್ಳನ್ನು ವಿಗ್ರಹಕ್ಕೆ ಹೋಲಿಸಿ ಹೇಳಲಾಗಿದೆ. ವಾಸ್ತವಿಕವಾಗಿ ಸುಳ್ಳು ಸಹ ಒಂದು ವಿಗ್ರಹವೇ ಆಗಿದೆ. ಅಲ್ಲವಾದರೆ ಸತ್ಯವನ್ನು ಬಿಟ್ಟು ಬೇರೆ ಕಡೆಗೆ ಹೋಗುವುದೇಕೆ.

ಸುಳ್ಳು ಸಹ ಒಂದು ವಿಗ್ರಹವೇ ಆಗಿದೆ. ಅದರ ಮೇಲೆ ಭರವಸೆ ಇರಿಸುವವನು ಅಲ್ಲಾಹನ ಬಗ್ಗೆ ಭರವಸೆ ತ್ಯಜಿಸುತ್ತಾನೆ. ಆದುದರಿಂದ ಸುಳ್ಳು ಹೇಳುವುದರಿಂದ ಅಲ್ಲಾಹನೂ ಕೈಬಿಟ್ಟು ಹೋಗುತ್ತಾನೆ. ನಾವು ಏಕದೇವ ವಿಶ್ವಾಸಿಗಳೆಂದು ವಾದಿಸುವುದಾದರೆ, ಅಲ್ಲಾಹನನ್ನು ಆರಾಧಿಸುವವರೆಂದು ನಾವು ವಾದಿಸುವುದಾದರೆ, ನಾವು ನೈಜ ಮುಸ್ಲಿಮರಾಗುವುದಾಗಿ ವಾದಿಸುವುದಾದರೆ, ಸುಳ್ಳನ್ನು ನಾವು ನಮ್ಮ ಒಳಗಿಂದ ಹೊರಗೆ ಹಾಕಬೇಕು. ಸುಳ್ಳುಗಾರರನ್ನು ಸಹ ಹೊರಗೆ ಹಾಕಬೇಕು. ಕೆಲವರು ಸಾಮಾನ್ಯ ವಿಷಯಗಳಿಗೆ ಸಂಬಂಧಿಸಿ ತಪ್ಪಾದ ಹೇಳಿಕೆ ನೀಡುತ್ತಾರೆ. ಇದು ಸತ್ಯವಿಶ್ವಾಸಿಗೆ ಶೋಭಾಯಮಾನವಾಗಿರುವುದಿಲ್ಲ. ಚಿಕ್ಕಪುಟ್ಟ ಕೆಲವು ತಪ್ಪು ಹೇಳಿಕೆಗಳು ಸುಳ್ಳು ಅಲ್ಲ ಎಂದು ಭಾವಿಸಬಾರದು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದಾರೆ: ಒಬ್ಬನು ಚಿಕ್ಕ ಮಗುವಿನೊಂದಿಗೆ ಇಲ್ಲಿ ಬಾ ನಾನು ನಿನಗೆ ಒಂದು ವಸ್ತು ಕೊಡುವೆನು ಎಂದು ಹೇಳಿ ನಂತರ ಆ ಮಗುವಿಗೆ ಅವನು ಏನನ್ನೂ ಕೊಡದಿದ್ದರೆ ಅವನು ಸುಳ್ಳು ಹೇಳಿದವನಾಗಿ ಗಣಿಸಲ್ಪಡುವನು. ಆದುದರಿಂದ ಹಾಸ್ಯರೂಪದಲ್ಲಿ ಸುಳ್ಳು ಹೇಳುವುದು ಸಹ ಸುಳ್ಳೇ ಆಗಿರುತ್ತದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಸಹ ಹೇಳಿದ್ದಾರೆ: ಸುಳ್ಳು ಹೇಳುವುದು ಪಾಪ ಕೃತ್ಯಗಳ ಕಡೆಗೆ ಮತ್ತು ದುಷ್ಕೃತ್ಯಗಳ ಕಡೆಗೆ ಒಯ್ಯುವುದು. ದುಷ್ಕೃತ್ಯಗಳು ನರಕದ ಕಡೆಗೆ ಒಯ್ಯುವುವು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಪಾಪ ಕೃತ್ಯದಿಂದ ರಕ್ಷಿಕೊಳ್ಳಲು ವಿಶಿಷ್ಟವಾಗಿ ಹೇಳಿದ್ದಾರೆ. ಅದು ಬೈಅತ್ ಶರತ್ತುಗಳಲ್ಲಿ ಸಹ ಸೇರಿದೆ. ಆ ಪಾಪಕೃತ್ಯ ವ್ಯಭಿಚಾರವಾಗಿದೆ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ **ವಲಾ ತಖ್‌ರಬುಝ್ಝಿನಾ** – ನೀವು ವ್ಯಭಿಚಾರದ ಸಮೀಪಕ್ಕೆ ಹೋಗಬೇಡಿರಿ (17:33). ಎಂದು ಹೇಳಿದ್ದಾನೆ. ಎಂದರೆ ವ್ಯಭಿಚಾರದ ಯೋಚನೆ ಹುಟ್ಟಲು ಸಾಧ್ಯವಿರುವ ಸಮಾರಂಭಗಳಿಗೆ ಸಹ ಹೋಗಬೇಡಿರಿ. ಈ ಪಾಪ ಸಂಭವಿಸಬಹುದಾದ ಮಾರ್ಗಗಳಿಂದಲೂ ದೂರವಿರಬೇಕು. ಇಂದಿನ ಕಾಲದಲ್ಲಿ ಟಿ.ವಿ. ಮತ್ತು ಇಂಟರ್‌ನೆಟ್‌ಗಳಲ್ಲಿ ಎಂತಹ ಅಶ್ಲೀಲ ಫಿಲ್ಮ್‌ಗಳನ್ನು ತೋರಿಸಲಾಗುತ್ತದೆ ಎಂದರೆ ಅವುಗಳಲ್ಲಿ ಬಹಿರಂಗವಾಗಿ ವ್ಯಭಿಚಾರವನ್ನು ಪ್ರಚೋದಿಸಲಾಗುತ್ತಿದೆ. ಆದುದರಿಂದ ಇಂತಹವುಗಳಿಂದ ತನ್ನನ್ನು ರಕ್ಷಿಸಿಕೊಳ್ಳುವುದು ಪ್ರತಿಯೊಬ್ಬ ಅಹ್ಮದಿಯ ಕೆಲಸವಾಗಿದೆ. ಅನೇಕ ಮನೆಗಳಲ್ಲಿ ಜಗಳಗಳು ನಡೆಯುತ್ತಿರುವುದು ಮತ್ತು ಅನೇಕ ಮನೆಗಳ ನೆಮ್ಮದಿ ಮುರಿಯುತ್ತಾ ಇರುವುದು ಅಥವಾ ನೆಮ್ಮದಿ ಮುರಿದಿರುವುದು ಈ ಕಾರಣದಿಂದಾಗಿದೆ. ಪತಿ ಕುಳಿತುಕೊಂಡು ಫಿಲ್ಮ್‌ಗಳನ್ನು ನೋಡುತ್ತಾ ಇರುತ್ತಾನೆ ಅಥವಾ ಇಂಟರ್‌ನೆಟ್ ನೋಡುತ್ತಾ ಕುಳಿತಿರುತ್ತಾನೆ ಮತ್ತು ಕೆಟ್ಟ ಯೋಚನೆಗಳು ಅವನಲ್ಲಿ ಉದ್ಭವಿಸುತ್ತಾ ಇರುತ್ತವೆ. ಅನೇಕ ಯುವಕರು ನಾಶೋನ್ಮುಖರಾಗಿರುವುದು ಇಂತಹ ಕೆಟ್ಟ ಜನರ ಸಹವಾಸದಲ್ಲಿರುವುದರಿಂದ ಮತ್ತು ಅಶ್ಲೀಲ ನಗ್ನ ಫಿಲ್ಮ್‌ಗಳನ್ನು ನೋಡುವ ಅಭ್ಯಾಸ ಹೊಂದಿರುವುದರಿಂದಲೂ ಆಗಿದೆ. ಒಟ್ಟಿನಲ್ಲಿ ಪ್ರತಿಯೊಬ್ಬ ಅಹ್ಮದಿ ವಿಶಿಷ್ಟವಾಗಿ ಇವುಗಳಿಂದ ರಕ್ಷಣೆ ಪಡೆಯಬೇಕಾಗಿದೆ.

ಒಬ್ಬ ನೈಜ ಅಹ್ಮದಿಯಾಗಲು ಪ್ರತಿಯೊಂದು ರೀತಿಯ ದೌರ್ಜನ್ಯದಿಂದ ರಕ್ಷಿಸಿಕೊಳ್ಳುವ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ವಿಶಿಷ್ಟವಾಗಿ ನಮ್ಮ ಗಮನ ಹರಿಸಿದ್ದಾರೆ. ಅವರು ಹೇಳಿದರು: ನೀವು ನನ್ನೊಂದಿಗೆ ಸಂಬಂಧ ಹೊಂದಿದವರಾಗಬೇಕಾದರೆ ಯಾವುದೇ ರೀತಿಯ ಕಿರುಕುಳ, ದೌರ್ಜನ್ಯ, ಕಲಹ, ಪಿತೂರಿ ಮೊದಲಾದುವುಗಳ ಯೋಚನೆ ಸಹ

ನಿಮ್ಮ ಹೃದಯದಲ್ಲಿ ಹೊಂದಬೇಡಿರಿ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಹೀಗೆ ಪ್ರಶ್ನೆ ಕೇಳಲಾಯಿತು: ಎಲ್ಲದಕ್ಕಿಂತಲೂ ದೊಡ್ಡ ದೌರ್ಜನ್ಯ ಯಾವುದು? ಎಂದು. ಅವರು ಹೇಳಿದರು: ಎಲ್ಲದಕ್ಕಿಂತ ದೊಡ್ಡ ದೌರ್ಜನ್ಯ ಇದಾಗಿದೆ– ಒಬ್ಬನು ತನ್ನ ಸಹೋದರನ ಜಮೀನಿನಿಂದ ಒಂದು ಮೊಳ ನೆಲವನ್ನು ಕಿತ್ತುಕೊಳ್ಳುವುದಾಗಿದೆ. ಆದುದರಿಂದ ಅನ್ಯರ ಹಕ್ಕುಗಳನ್ನು ಕಿತ್ತುಕೊಳ್ಳುವುದು ಬಹಳ ದೊಡ್ಡ ಪಾಪ ಕೃತ್ಯವಾಗಿದೆ. ನಾವು ಮುಸ್ಲಿಮೇತರರೊಂದಿಗೆ ಇಸ್ಲಾಮ್ ಧರ್ಮದ ಒಳಿತುಗಳನ್ನು ವಿವರಿಸುವಾಗ ಹೇಳುತ್ತೇವೆ– ಜನರ ಹಕ್ಕುಗಳನ್ನು ಈಡೇರಿಸಿಕೊಡುವ ಬಗ್ಗೆ ಅತ್ಯುನ್ನತ ಮಟ್ಟದ ಉಪದೇಶಗಳು ಇಸ್ಲಾಮ್ ಧರ್ಮದಲ್ಲಿವೆ ಎಂದು. ಇಸ್ಲಾಮ್ ಧರ್ಮ ಹಕ್ಕುಗಳನ್ನು ಪಡೆದುಕೊಳ್ಳುವ ಬಗ್ಗೆ ಉಪದೇಶಿಸುವುದಕ್ಕೆ ಬದಲಾಗಿ ಹಕ್ಕುಗಳನ್ನು ನೀಡುವ ಬಗ್ಗೆ ಉಪದೇಶಿಸುತ್ತದೆ ಎಂದು ನಾವು ಅನ್ಯ ಜನರೊಂದಿಗೆ ಬಹಳ ಉತ್ಸಾಹ ಭರಿತರಾಗಿ ಹೇಳುತ್ತೇವೆ. ಆದರೆ ನಮ್ಮ ಕೃತ್ಯಗಳು ಇವುಗಳಿಗೆ ವಿರುದ್ಧವಾಗಿದ್ದರೆ ನಾವು ಪಾಪಿಗಳಾಗುತ್ತೇವೆ ಮತ್ತು ಸುಳ್ಳು ಹೇಳುವವರಾಗುತ್ತೇವೆ. ಆದುದರಿಂದ ಪ್ರತಿಯೊಬ್ಬ ಅಹ್ಮದಿ ಈ ವಿಷಯದ ಬಗ್ಗೆ ಸಹ ಸೂಕ್ಷ್ಮವಾಗಿ ಪರಿಶೋಧಿಸಬೇಕು.

ಅಲ್ಲಾಹನ ಆರಾಧನೆ ಮಾಡುವುದು ಸತ್ಯ ವಿಶ್ವಾಸಿಯಾಗಲಿರುವ ಮುಖ್ಯ ಶರತ್ತಾಗಿದೆ. ಅಲ್ಲಾಹನು ಮನುಷ್ಯನನ್ನು ಸೃಷ್ಟಿಸಿರುವುದರ ಉದ್ದೇಶವೇ ತನ್ನನ್ನು ಆರಾಧನೆ ಮಾಡುವುದಾಗಿದೆ ಎಂದು ಹೇಳಿದ್ದಾನೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ್ದಾರೆ: ತಮ್ಮನ್ನು ನನ್ನ ಜಮಾಅತಿಗೆ ಸೇರಿದವರೆಂದು ಗಣಿಸುವ ಎಲ್ಲ ಜನರು ಸತ್ಯವಾಗಿಯೂ ತಖ್ವದ ಮಾರ್ಗದಲ್ಲಿ ಹೆಜ್ಜೆ ಹಾಕುವಾಗ ಮಾತ್ರ ನೀವು ನನ್ನ ಜಮಾಅತಿನಲ್ಲಿ ಸೇರಿದವರೆಂದು ಆಕಾಶದಲ್ಲಿಯೂ ಗಣಿಸಲ್ಪಡುವಿರಿ. ಆದುದರಿಂದ ನೀವು ನಿಮ್ಮ ನಮಾಝ್‌ಗಳನ್ನು ಎಂತಹ ಭಯ ಭಕ್ತಿಯಿಂದ ನಿರ್ವಹಿಸಬೇಕೆಂದರೆ ನೀವು ಅಲ್ಲಾಹನನ್ನು ನೋಡುತ್ತಿರುವಿರೋ ಎಂಬಂತೆ. ನಮಾಝ್ ಪ್ರತಿಯೊಬ್ಬ ಮುಸ್ಲಿಮನಿಗೆ ಫರ್ಝ್ ಆಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಒಂದು ಸಮುದಾಯದ ಜನರು ಬಂದು ಇಸ್ಲಾಮ್ ಧರ್ಮ ಸ್ವೀಕರಿಸಿ ವಿನಂತಿಸಿದರು: ಓ ಸಂದೇಶವಾಹಕರೇ, ಸಲ್ಲಲ್ಲಾಹು ಅಲೈಹಿ ವಸಲ್ಲಮ್, ನಮಗೆ ನಮಾಝ್ ಅನುಷ್ಠಾನವನ್ನು ಮಾಫೀ ಮಾಡಿರಿ. ನಮ್ಮ ಬಟ್ಟೆಗಳು ಕೊಳೆಯಾಗಿರುತ್ತವೆ. ನಮಗೆ ಪುರುಸೊತ್ತು ಸಹ ಸಿಗುವುದಿಲ್ಲ ಎಂದು ಹೇಳಿದರು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರೊಂದಿಗೆ ಹೇಳಿದರು: ನಮಾಝ್ ಅನುಷ್ಠಾನ ಇಲ್ಲದಿದ್ದರೆ ಧರ್ಮದಲ್ಲಿ ಇರುವುದಾದರೂ ಏನು? ನಮಾಝ್ ಅನುಷ್ಠಾನ ಇಲ್ಲದಿರುವ ಧರ್ಮ ಧರ್ಮವೇ ಅಲ್ಲ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನಮಾಝ್ ಎಂದರೇನು? ಅದು ಮನುಷ್ಯನು ತನ್ನ ವಿನಯವನ್ನೂ ಬಲಹೀನತೆಯನ್ನೂ ಅಲ್ಲಾಹನ ಮುಂದೆ ಇರಿಸಿ ಅವನಿಂದ ತನ್ನ ಬೇಡಿಕೆಗಳು ಅಂಗೀಕಾರ ಪಡೆಯುವಂತೆ ಇಚ್ಛಿಸುವುದಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ಸ್ಪಷ್ಟವಾಗಿ ಹೇಳಿದ್ದಾರೆ. ಮನುಷ್ಯ ಮತ್ತು ಮೃಗದ ಮಧ್ಯೆ ವ್ಯತ್ಯಾಸವನ್ನು ಸೂಚಿಸುವ ವಸ್ತು ಅಲ್ಲಾಹನ ಆರಾಧನೆ ಮತ್ತು ನಮಾಝ್ ಆಗಿದೆ.

ನಾನು ಅನೇಕ ಸಾರಿ ಹೇಳಿದ್ದೇನೆ, ನಮಾಝ್ ಸೆಂಟರ್ ಅಥವಾ ಮಸ್‌ಜಿದ್ ದೂರವಿದ್ದರೆ ಸಮೀಪವಿರುವ ಕೆಲವು ಮನೆಗಳ ಜನರು ಪರಸ್ಪರ ಜಮಾಯಿಸಿ ಒಂದು ಸ್ಥಳವನ್ನು ನಿಶ್ಚಯಿಸಿ ನಮಾಝ್ ನಿರ್ವಹಿಸಬೇಕು. ಆ ಮೂಲಕ ಬಾಜಮಾಅತ್ ನಮಾಝ್ ಮಾಡಿದ ಪುಣ್ಯ ದೊರಕುವುದಲ್ಲದೆ ನಮಾಝ್ ಅನುಷ್ಠಾನದ ಬಗ್ಗೆ ಶ್ರದ್ಧೆಯೂ ತಲೆದೋರುವುದು. ಮತ್ತು ನಮ್ಮ ಮುಂದಿನ ಪೀಳಿಗೆಯ ಸುಧಾರಣೆ ಸಹ ನಡೆಯುವುದು. ನಮಾಝ್ ಬಗ್ಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಒಂದು ಹೇಳಿಕೆ ಹೇಗಿದೆ ಎಂದರೆ ಖಂಡಿತವಾಗಿಯೂ ಅದು ನಮ್ಮ ಹೃದಯಗಳನ್ನು ನಡುಗಿಸುವಂತಹದಾಗಿದೆ. ಅವರು ಹೇಳಿದರು: ಖಿಯಾಮತ್ ದಿನದಂದು ಅಲ್ಲಾಹನು ತನ್ನ ದಾಸರಿಂದ ಪ್ರಥಮವಾಗಿ ಪಡೆದುಕೊಳ್ಳುವ ಲೆಕ್ಕ ನಮಾಝ್ ಅನುಷ್ಠಿಸಿದ ಬಗ್ಗೆಯಾಗಿರುವುದು. ಈ ಲೆಕ್ಕ ಸರಿಯಾಗಿದ್ದರೆ ದಾಸನು ಜಯಶಾಲಿಯಾಗುವನು ಮತ್ತು ಮೋಕ್ಷ ಗಳಿಸುವನು. ನಮಾಝಿನ ಲೆಕ್ಕ ಸರಿಯಾಗದಿದ್ದರೆ ದಾಸನು ಸೋತು ಹೋಗುವನು. ಅವನು ನಷ್ಟವನ್ನು ಅನುಭವಿಸುವನು.

ಅಲ್ಲಾಹನು ಪ್ರತಿಯೊಬ್ಬ ಅಹ್ಮದಿಗೆ ಈ ಹೊಣೆಗಾರಿಕೆ ಈಡೇರಿಸುವ ಭಾಗ್ಯ ದಯಪಾಲಿಸಲಿ. ತಹಜ್ಜುದ್ ಮತ್ತು ನಫ್ಲ್ ನಮಾಝ್‌ಗಳ ಬಗ್ಗೆ ಸಹ ಶ್ರದ್ಧೆ ನೀಡಬೇಕು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಹೇಳಿದ್ದಾರೆ: ಫರ್ಝ್ ನಮಾಝ್‌ಗಳಲ್ಲಿ ಸಂಭವಿಸಿರಬಹುದಾದ ಕುಂದುಕೊರತೆಗಳು ನಫ್ಲ್ ನಮಾಝ್‌ಗಳ ಮೂಲಕ ಪರಿಹರಿಸಲ್ಪಡುವುವು.

ಇನ್ನೊಂದು ಅತ್ಯಂತ ಆವಶ್ಯಕವಾದ ವಿಷಯ ಅದರ ಬಗ್ಗೆ ಪ್ರತಿಯೊಬ್ಬ ದೃಷ್ಟಿ ಇರಿಸಬೇಕಾಗಿದೆ. ಅದು ಅಲ್ಲಾಹನಿಂದ ತನ್ನ ಪಾಪ ಕೃತ್ಯಗಳ ಬಗ್ಗೆ ಕ್ಷಮೆಯನ್ನು ಯಾಚಿಸುವ ಬಗ್ಗೆ ನಿರಂತರ ಶ್ರದ್ಧೆ ನೀಡುವುದಾಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದಾರೆ: ಜನರು ತಮ್ಮನ್ನು ಕ್ಷಮಿಸಬೇಕೆಂದು ಬೇಡಿಕೊಳ್ಳುತ್ತಾ ಇಸ್ತಿಗ್‌ಫಾರ್ ಪ್ರಾರ್ಥನೆ ಮಾಡುತ್ತಾ ಇರುವಾಗ ಅಲ್ಲಾಹನು ಅವರಿಗೆ ಶಿಕ್ಷೆ ನೀಡುವವನಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳಿದ್ದಾರೆ: ಈ ಕಾಲಘಟ್ಟದಲ್ಲಿ ಪವಿತ್ರ ಖುರ್‌ಆನಿನ ಈ ದುಆ ಪಠಿಸುತ್ತಾ ಇರಬೇಕು: **ರಬ್ಬನಾ ಝುಲಮ್‌ನಾ ಅನ್‌ಫುಸನಾ ವ ಇನ್‌ಲಮ್ ತಗ್‌ಫಿರ್‌ಲನಾ ವ ತರ್‌ಹಮ್‌ನಾ ಲನಕೂನನ್ನ ಮಿನಲ್ ಖಾಸಿರೀನ್** – ನಮ್ಮ ಪ್ರಭೂ, ನಾವೇ ನಮ್ಮ ಮೇಲೆ ಅಕ್ರಮವಾಗಿ ವರ್ತಿಸಿದೆವು. ನೀನು ನಮ್ಮನ್ನು ಕ್ಷಮಿಸಿಬಿಟ್ಟು ನಮ್ಮ ಮೇಲೆ ಕರುಣೆ ತೋರಿಸದಿದ್ದರೆ ಖಂಡಿತವಾಗಿಯೂ ನಾವು ನಷ್ಟ ಹೊಂದಿದವರಾಗುವೆವು. (7:24).

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನನ್ನು ನಂಬುವವರು ಹುಖೂಖುಲ್ ಇಬಾದ್ (ದಾಸರ ಹಕ್ಕುಗಳು) ಈಡೇರಿಸಬೇಕೆಂಬ ಮೂಲಭೂತ ಶರತ್ತನ್ನು ವಿಧಿಸಿದ್ದಾರೆ. ಅಲ್ಲಾಹನ ಸೃಷ್ಟಿಗಳಿಗೆ ಯಾವುದೇ ರೀತಿಯ ಕಷ್ಟ ನೀಡುವುದರಿಂದ ತನ್ನನ್ನು ನಂಬುವವರು ಹಿಂದೆ ಸರಿಯಬೇಕೆಂದೂ ಅವರು ಆಜ್ಞಾಪಿಸಿದ್ದಾರೆ. ಮುಸ್ಲಿಮರು ಈ ವಾಸ್ತವಿಕತೆಯನ್ನು ಅರಿತುಕೊಂಡು ಕಾರ್ಯನಿರತರಾಗುತ್ತಿದ್ದರೆ, ಮುಸ್ಲಿಮ್ ಸರಕಾರಗಳು ಈ ತತ್ವವನ್ನು ಅನುಷ್ಠಾನಕ್ಕೆ ತರುತ್ತಿದ್ದರೆ ಇಂದಿನ ಕಾಲದಲ್ಲಿ ಮುಸ್ಲಿಮರೇ ಮುಸ್ಲಿಮರನ್ನು ಆಕ್ರಮಿಸಿ ಅವರ

ಜೀವಗಳನ್ನೂ ಸಂಪತ್ತನ್ನೂ ನಾಶ ಮಾಡುತ್ತಿರುವ ಇಂದಿನ ಸ್ಥಿತಿ, ಸಾವಿರಾರು ಅಲ್ಲ ಲಕ್ಷಾಂತರ ಮಕ್ಕಳು ಅನಾಥರಾಗುವ ಇಂದಿನ ಸ್ಥಿತಿ, ಲಕ್ಷಗಟ್ಟಲೆ ಮಹಿಳೆಯರು ವಿಧವೆಯರಾಗುವ ಇಂದಿನ ಸ್ಥಿತಿ, ವೃದ್ಧರೂ ಹತರಾಗುತ್ತಿರುವ ಇಂದಿನ ಸ್ಥಿತಿ ಎಂದೂ ತಲೆದೋರುತ್ತಿರಲಿಲ್ಲ.

ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ನಾವು ನಮ್ಮನ್ನು ರಕ್ಷಿಸಿಕೊಳ್ಳುವ ಬಗ್ಗೆ ಹೇಳಿರುವ ಮತ್ತೊಂದು ಬಹಳ ದೊಡ್ಡ ದುರ್ಗುಣ ದುರಹಂಕಾರವಾಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅದರ ಬಗ್ಗೆ ಬಹಳ ಉಪದೇಶಿಸಿದ್ದಾರೆ. ಅವರು ಹೇಳಿದರು: ಒಬ್ಬನ ಹೃದಯದಲ್ಲಿ ಸಾಸಿವೆ ಕಾಳಿನಷ್ಟು ಸಹ ದುರಹಂಕಾರವಿದ್ದರೆ ಅವನು ಸ್ವರ್ಗವನ್ನು ಪ್ರವೇಶಿಸಲಾರ ಎಂದು. ಆದುದರಿಂದ ಪ್ರತಿಯೊಬ್ಬ ಅಹ್ಮದಿ ತನ್ನನ್ನು ಈ ದುರ್ಗುಣದಿಂದ ರಕ್ಷಿಸಿಕೊಳ್ಳಲು ಪ್ರಯತ್ನಿಸಬೇಕು. ನನ್ನನ್ನು ಭೇಟಿಯಾದ ಎರಡು ಸಂದರ್ಭಗಳಲ್ಲಿ ಹುಡುಗಿಯರು ನನ್ನೊಂದಿಗೆ ದೂರಿದರು ಜಮಾಅತ್‌ನಲ್ಲಿ ಕೆಲವು ರೀತಿಯ ವಂಶೀಯ ತಾರತಮ್ಯತೆ ಇದೆ ಎಂದು. ಯುವ ಜನರಲ್ಲಿ ಇಂತಹ ಯೋಚನೆ ತಲೆದೋರುತ್ತಿರುವುದಾದರೆ ಅದು ಅತ್ಯಂತ ದೊಡ್ಡ ತಪ್ಪು ಯೋಚನೆಯಾಗಿದೆ. ನಮ್ಮ ಜಮಾಅತಿನ ಅಧೀನ ಸಂಘಟನೆಗಳು ಈ ವಿಷಯದ ಬಗ್ಗೆ ಗಮನಿಸಬೇಕು.

ಅಲ್ಲಾಹನ ಅನುಗ್ರಹದಿಂದ ಲೋಕದಾದ್ಯಂತ ಜಮಾಅತ್‌ಗಳು ಸಾಂಪತ್ತಿಕ ತ್ಯಾಗದಲ್ಲಿ ಮುಂದುವರಿಯುತ್ತಿವೆ. ಆದರೆ ಸ್ಥಿರವಾಗಿ ನೀಡಲ್ಪಡುವ ಚಂದದ ವ್ಯವಸ್ಥೆ ಬಗ್ಗೆ ಪರಿಶೋಧಿಸುವಾಗ ಅದರಲ್ಲಿ ಬಹಳ ಕೊರತೆಗಳು ಕಂಡು ಬರುತ್ತವೆ. ಅದರ ಕಡೆಗೆ ಶ್ರದ್ಧೆ ನೀಡುವುದು ಆವಶ್ಯಕವಾಗಿದೆ. ಸರಿಯಾದ ಶರಹ್ (ನಿಶ್ಚಿತ ದರ) ಪ್ರಕಾರ ಚಂದವನ್ನು ನೀಡಲು ಜನರು ಪ್ರಾರಂಭಿಸುವುದಾದರೆ ಮಸ್‌ಜಿದ್ ಮೊದಲಾದವುಗಳ ನಿರ್ಮಾಣಕ್ಕೋಸ್ಕರ ಮತ್ತು ಇತರ ಕೆಲಸಗಳಿಗೋಸ್ಕರ ಪ್ರತ್ಯೇಕವಾಗಿ ಚಂದವನ್ನು ಅಪೇಕ್ಷಿಸುವ ಆವಶ್ಯಕತೆ ಉಂಟಾಗಲಾರದೆಂದು ನಾನು ಭಾವಿಸುತ್ತೇನೆ. ಈ ನಿಟ್ಟಿನಲ್ಲಿ ನಿಮ್ಮನ್ನು ಪರಿಶೋಧಿಸಿರಿ. ಚಂದ ಆಮ್‌ಗೆ ಸಂಬಂಧಿಸಿದ ನಿಮ್ಮ ಬಜೆಟನ್ನು ಪುನಃ ಪರಿಶೋಧಿಸಿ ಕಡಿಮೆ ಚಂದ ಬರೆಸಿದವರು ಸರಿಯಾಗಿ ಬರೆಯಿಸಲಿ.

ಕೊನೆಯದಾಗಿ ನಾನು ಅನುಸರಣೆ ಬಗ್ಗೆ ನಿಮ್ಮ ಗಮನ ಸೆಳೆಯಲು ಬಯಸುತ್ತೇನೆ. ಕೆಲವು ವಕ್ರ ಸ್ವಭಾವದ ಜನರು ಅಥವಾ ಕಪಟ ವಿಶ್ವಾಸ ಹೊಂದಿದವರು ಹೇಳುತ್ತಾ ಇರುತ್ತಾರೆ, ಖಲೀಫರನ್ನು ಅನುಸರಿಸುವ ಪ್ರತಿಜ್ಞೆ ಮಾಡಿರುವುದು ಮಅ್‌ರೂಫ್ (ಉತ್ತಮ) ತೀರ್ಮಾನಗಳ ಬಗ್ಗೆ ಮಾತ್ರವಾಗಿದೆ. ಆದರೆ ಕೆಲವು ಖಲೀಫರ ತೀರ್ಮಾನಗಳು ಮಅ್‌ರೂಫ್ (ಉತ್ತಮ) ಆಗಿರುವುದಿಲ್ಲ ಎಂದು ಹೇಳುತ್ತಾರೆ. ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಈ ವಿಷಯದ ಬಗ್ಗೆ ವಿಶದೀಕರಿಸುತ್ತಾ ಹೀಗೆ ಹೇಳಿದ್ದರು: ಪವಿತ್ರ ಖುರ್‌ಆನ್‌ನಲ್ಲಿ ಇದರ ಕುರಿತು ಪ್ರಸ್ತಾಪಿಸಲ್ಪಟ್ಟಿದೆ. **ವಲಾ ಯಅ್‌ಸೀನಕ ಫೀ ಮಅ್‌ರೂಫಿನ್.** ಸಹಾಬರು ಮಅ್‌ರೂಫ್ ವಿಷಯಗಳಿಗೆ ಸಂಬಂಧಿಸಿ ನಿನಗೆ ಅವಿಧೇಯತೆ ತೋರಿಸುವುದಿಲ್ಲ. ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಹೇಳುತ್ತಾರೆ: ಖಲೀಫರನ್ನು ಆಕ್ಷೇಪಿಸುವವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನ್ಯೂನತೆಗಳ ಪಟ್ಟಿ ತಯಾರಿಸಿರುವರೇ — ಅವರು ಮಾಡಿದ ತೀರ್ಪುಗಳಲ್ಲಿ ಯಾವುದು ಸರಿ ಮತ್ತು ಯಾವುದು ತಪ್ಪು ಎಂದು? (ನಊಝು ಬಿಲ್ಲಾಹ್ ಮಿನ್ ದ಼ಾಲಿಕ್).

ತಾಅತ್ ದರ್ ಮಅ್‌ರೂಫ್ (ಉತ್ತಮವಾದ ತೀರ್ಮಾನಗಳ ಅನುಸರಣೆ) ಅಥವಾ ಮಅ್‌ರೂಫ್ ಫೈಸಲದ ಅನುಸರಣೆ ಆವಶ್ಯಕವಾಗಿರುವುದು ಅಲ್ಲಾಹನ ಆಜ್ಞೆಗಳ ಬಗ್ಗೆಯಾಗಿದೆ ಮತ್ತು ಅಲ್ಲಾಹನ ಸಂದೇಶವಾಹಕರ ಆಜ್ಞೆಗಳ ಬಗ್ಗೆಯಾಗಿದೆ. ಎಲ್ಲಿಯ ತನಕ ನೈಜ ಖಿಲಾಫತ್ ಜಾರಿಯಲ್ಲಿರುವುದೋ ಅಲ್ಲಿನ ತನಕ ಅಲ್ಲಾಹನ ಮತ್ತು ಅವನ ಸಂದೇಶವಾಹಕರ ಆಜ್ಞೆಗಳಿಗೆ ವಿರುದ್ಧವಾಗಿ ತೀರ್ಮಾನ ಆಗಲಾರದು. ಪವಿತ್ರ ಖುರ್‌ಆನ್ ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸುನ್ನತ್ (ನಡೆವಳಿಕೆ) ಪ್ರಕಾರವೇ ತೀರ್ಮಾನಗಳಾಗುವುವು. ಆದುದರಿಂದ ಅಹ್ಮದಿಯಾ ಜಮಾಅತಿನ ಭಾಗವಾಗಿ ತಾನಿದ್ದೇನೆ ಎಂದು ಭಾವಿಸುವ ಪ್ರತಿಯೊಬ್ಬ ವ್ಯಕ್ತಿ ಆಯಾ ಕಾಲದ ಖಲೀಫರು ಜಮಾಅತಿಗೆ ಸಂಬಂಧಿಸಿ ನೀಡುವ ಮಾರ್ಗದರ್ಶನಗಳನ್ನು ಅನುಸರಿಸಿ ವರ್ತಿಸುವುದು ಕಡ್ಡಾಯವಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ್ದಾರೆ: ನನ್ನೊಂದಿಗೆ ಸಂಬಂಧ ಜೋಡಿಸಿದವರು ಮತ್ತು ನನ್ನನ್ನು ಬೈಅತ್ ಮಾಡಿದವರು ತಮ್ಮನ್ನು ಸುಧಾರಣೆ ಮಾಡುವುದಿಲ್ಲವಾದರೆ ಅಲ್ಲಾಹನ ಮತ್ತು ಅವನ ಸಂದೇಶವಾಹಕರ ಉಪದೇಶ ಪ್ರಕಾರ ತಮ್ಮ ಜೀವನವನ್ನು ನಡೆಸುವುದಿಲ್ಲವಾದರೆ ಅಂತಹ ಜನರ ಬೈಅತ್ ಯಾವುದೇ ಪ್ರಯೋಜನ ನೀಡಲಾರದು. ಆದುದರಿಂದ ನಾವು ಈ ವಾಸ್ತವಿಕತೆಯನ್ನು ಅರಿತುಕೊಂಡು ಕಾರ್ಯನಿರತರಾಗಲು ಪ್ರಯತ್ನಿಸುವುದಾದರೆ ಮಾತ್ರ ನಾವು ಅಹ್ಮದಿಯಾಗಿರುವುದರ ಪ್ರಯೋಜನ ಸಿಗುವುದು. ಇಸ್ಲಾಮಿನ ನೈಜ ತತ್ವಗಳನ್ನು ಅರಿತುಕೊಂಡು ಅವುಗಳನ್ನು ಅನುಷ್ಠಾನಕ್ಕೆ ತರುವ ಭಾಗ್ಯವನ್ನು ಅಲ್ಲಾಹನು ನಮಗೆ ದಯಪಾಲಿಸಲಿ – ಆಮೀನ್.

—————*****—————


***Friday Sermon delivered by Hadrath Khaleefatul Masih Al Khamis** (atba)*

*At Masjid BaithuRahman Meryland, USA. On 02-11-2018.*

**Summarized by** *Majlis Ansarullah Bharat*

***Kannada Translation**:* M. Ubeidullah for Kannada Desk, Qadian

***Reviewed by**:* M.P Ibrahim |***Typing**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian



***Email**:khutuba.kannada@gmail.com*



**You can find all the Sermons archived at**: www.alislam.org/friday-sermon